# ವ್ಯಾಕ್ಸೀನ್

## ಫಲಿಸಿತೆ ಪ್ರಾರ್ಥನೆ?

2020ರಲ್ಲಿ ಮನುಕುಲದ ಪ್ರಾರ್ಥನೆ ಯಾವುದಾಗಿರಬಹುದು? 2020 ಮಾತ್ರವಲ್ಲ, 2021ರ ಪ್ರಾರ್ಥನೆಯೂ ಒಂದೇ – ವ್ಯಾಕ್ಸೀನ್! ಕೊರೊನಾ ಕಾರಣದಿಂದಾಗಿ ಮೊದಲ ಬಾರಿಗೆ ಇಡೀ ವಿಶ್ವದ ಕಣ್ಣುಗಳೆಲ್ಲವೂ ವ್ಯಾಕ್ಸೀನ್‌ನತ್ತ ನೆಟ್ಟಿವೆ. 'ಕೋವಿಡ್–19' ವೈರಾಣು ವಿರುದ್ಧದ ನಿರ್ಣಾಯಕ ಸಂಘರ್ಷದಲ್ಲಿ ವ್ಯಾಕ್ಸೀನ್‌ಗಳು ಅಮೃತದಂತೆ ಕಾಣಿಸುತ್ತಿವೆ. ಇನ್ನುಮುಂದಿರುವುದು ವ್ಯಾಕ್ಸೀನ್‌ಗಳನ್ನು ಎಲ್ಲರಿಗೂ ತಲುಪಿಸುವ ಸವಾಲು. ಅಂದಹಾಗೆ, ಅಪಾಯಕಾರಿ ಸೋಂಕುಗಳಿಂದ ತಪ್ಪಿಸಿಕೊಳ್ಳಲು ಮನುಕುಲ ಹುಡುಕಿಕೊಂಡ ಈ ವ್ಯಾಕ್ಸೀನ್‌ಗಳ ಚರಿತ್ರೆ ಸಾಹಸಮಯ ಆಗಿರುವಂತೆಯೇ ಸ್ವಾರಸ್ಯಕರವೂ ಹೌದು. ಹಲವು ವಿಜ್ಞಾನಿಗಳ ಪರಿಶ್ರಮ, ಬದ್ಧತೆ ಹಾಗೂ ತ್ಯಾಗದ ಪ್ರತಿಫಲವೇ ಈ ವ್ಯಾಕ್ಸೀನ್‌ಗಳು. ಕೊರೊನಾ ಸೋಂಕಿಗೆ ಸಂಬಂಧಿಸಿದ ಸುರಕ್ಷತಾಕವಚದ ಲಭ್ಯತೆಯ ದಿನಗಳು ಸನ್ನಿಹಿತವಾಗುತ್ತಿರುವ ಸಂದರ್ಭದಲ್ಲಿ, ವ್ಯಾಕ್ಸೀನ್ ನಡೆದುಬಂದ ದಾರಿಯ ಅವಲೋಕನ.

■ ಸುಧೀಂದ್ರ ಹಾಲ್ದೊಡ್ಡೇರಿ

**ವೈರಸ್ ಆಯುಸ್ಸು ತಗ್ಗಿಸಲು ಲಸಿಕೆಗಳ ಸರ್ಕಸ್ಸು**